595(459) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ಹಾಗೂ ಪೂರ್ಣಗೊಂಡಿರುವ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳು ಯಾವುವು;

ಆ) ಪೂರ್ಣಗೊಳ್ಳದಿರುವ ಯೋಜನೆಗಳು ಪೂರ್ಣಗೊಳ್ಳಲು ಎಷ್ಟು ಕಾಲ ಬೇಕು ಹಾಗೂ ಎಷ್ಟು ಹಣ ಬೇಕಾಗುವುದು;

ಇ) ಎಲ್ಲ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳು ಪೂರ್ಣಗೊಂಡಾಗ ಎಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುವುದು;

ಈ) ರಾಜ್ಯದ ಜಲ ನೀತಿಯಲ್ಲಿ ಭರವಸೆ ನೀಡಿದಂತೆ 2005ರ ಅಂತ್ಯದ ವೇಳೆಗೆ ಈ ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದೇ;

ಉ) ರಾಜ್ಯದ ನೀರಾವರಿ ಪ್ರದೇಶದ ನೀರು ಬಳಕೆದಾರರ ರೈತರನ್ನು ಅಧಿಕಾರಯುಕ್ತರನ್ನಾಗಿ ಮಾಡುವ ಉದ್ದೇಶದಿಂದ ರಚಿಸಲಾದ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಉಳಿಸಿ ಬಲಗೊಳಿಸಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ರಾಜ್ಯದಲ್ಲಿ ಪೂರ್ಣಗೊಂಡಿರುವ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ಸಂಖ್ಯೆ–41 ಹಾಗೂ ಅನುಷ್ಠಾನಗೊಳ್ಳುತ್ತಿರುವ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ಸಂಖ್ಯೆ–38 ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪೂರ್ಣಗೊಳ್ಳದಿರುವ ಯೋಜನೆಗಳನ್ನು ಪೂರ್ಣಗೊಳಿಸಲು ರೂ. 7040.46 ಕೋಟಿಗಳು ಬೇಕಾಗಿರುತ್ತದೆ. ಯೋಜನೆಗಳನ್ನು ಆರ್ಥಿಕ ಸಂಪನ್ಮೂಲಗಳ ಲಭ್ಯತೆ ಮೇರೆಗೆ ಪೂರ್ಣಗೊಳಿಸಲಾಗುವುದು.

ಇ) ರಾಜ್ಯದ ಎಲ್ಲ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳು ಪೂರ್ಣಗೊಂಡಾಗ ಸುಮಾರು 35 ಲಕ್ಷ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುವುದು;

ಈ) ರಾಜ್ಯದ ಜಲ ನೀತಿಯಂತೆ ಪ್ರಗತಿಯಲ್ಲಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಸಂಪನ್ಮೂಲಗಳ ಲಭ್ಯತೆ ಅನುಗುಣವಾಗಿ ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಉ) ಹೌದು ರಾಜ್ಯದ ನೀರಾವರಿ ಪ್ರದೇಶದ ನೀರು ಬಳಕೆದಾರರ ರೈತರನ್ನು ಅಧಿಕಾರ ಯುಕ್ತರನ್ನಾಗಿ ಮಾಡುವ ಉದ್ದೇಶದಿಂದ ರಚಿಸಲಾದ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಉಳಿಸಿ ಉಳಿದ ಪ್ರದೇಶಗಳಲ್ಲಿ ನೀರು ಬಳಕೆದಾರರ ಸಂಘಗಳನ್ನು ಸ್ಥಾಪಿಸಲು ಪ್ರಯತ್ನಿಸಲಾಗುತ್ತಿದೆ.

ಅನುಬಂಧ

ರಾಜ್ಯದ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿವರಗಳು

ಕ್ರ.ಸಂ.	ಯೋಜನೆ	ಬಾಕಿ ವೆಚ್ಚ
ಪೂರ್ಣಗೊಂಡಿರುವ ಯೋಜನೆಗಳು : ಭಾರಿ ನೀರಾವರಿ ಯೋಜನೆಗಳು		
1.	ತುಂಗಾ ಅಣೆಕಟ್ಟು	–
2.	ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆ	–
3.	ವಾಣಿವಿಲಾಸ ಸಾಗರ	–
4.	ಭದ್ರಾ ಜಲಾಶಯ	–
5.	ಘಟಪ್ರಭಾ ಹಂತ 1 ಮತ್ತು 2	–
6.	ಕೃಷ್ಣರಾಜಸಾಗರ	–
7.	ಕಾವೇರಿ ಅಣೆಕಟ್ಟು ನಾಲೆಗಳು	–
8.	ನುಗು ಜಲಾಶಯ	–
ಪೂರ್ಣಗೊಂಡಿರುವ ಯೋಜನೆಗಳು : ಮಧ್ಯಮ ನೀರಾವರಿ ಯೋಜನೆಗಳು		
1.	ಅಂಬ್ಲಿಗೋಳ	–
2.	ಅಂಜನಾಪುರ	–
3.	ಅರೆಶಂಕರ	–
4.	ಚಂದ್ರಂಪಳ್ಳಿ	–
5.	ಚಿತವಾಡಗಿ	–
6.	ಧರ್ಮ	–
7.	ಗಾಯತ್ರಿ	–
8.	ಹಗರಿಬೊಮ್ಮನಹಳ್ಳಿ	–
9.	ಹತ್ತಿಕುಣಿ	–
10.	ಜಂಬದಹಳ್ಳ	–
11.	ಕಳಾಸ್‌ಕೋಪ್	–
12.	ಕನಕನಾಲಾ	–
13.	ಕೊಳ್ಳಿ ವಿಯರ್	–
14.	ನಾಗಥಾಣಾ	–
15.	ನಾರಾಯಣಪುರ	–
16.	ನಾರೀಹಳ್ಳ	–
17.	ರಜೋಲಿಬಂಡಾ	–
18.	ರಾಮನಹಳ್ಳಿ	–
19.	ಸೌದಾಗರ್	–
20.	ಬೈರಮಂಗಳಾ	–

1	2	3
21.	ಗುಂಡಾಲ್	–
22.	ಹೆಬ್ಬಳ್ಳ	–
23.	ಕಣ್ವ	–
24.	ಮಂಗಳಾ	–
25.	ಮಾರ್ಕೋನಹಳ್ಳಿ	–
26.	ನಲ್ಲೂರು ಅಮ್ಮಣ್ಣಿಕೆರೆ	–
27.	ಸುವರ್ಣಾವತಿ	–
28.	ಬಾಚಂಕಿ	–
29.	ತೀತಾ	–
30.	ಭದ್ರಾ ಅಣೆಕಟ್ಟು	–
31.	ಗೋಕಾಕ್ ಕೆನಾಲ್	–
32.	ಮುಲ್ಲಾಮರಿ ಮೇಲ್ದಂಡೆ ಯೋಜನೆ	–
33.	ರಾಣಿಕೆರೆಗೆ ಪೂರಕ ಕಾಲುವೆ	–
ಪ್ರಗತಿಯಲ್ಲಿರುವ ಯೋಜನೆಗಳು : ಭಾರಿ ನೀರಾವರಿ ಯೋಜನೆಗಳು		**ಬಾಕಿ ವೆಚ್ಚ (ರೂ. ಲಕ್ಷಗಳಲ್ಲಿ)**
1.	ಘಟಪ್ರಭಾ ಹಂತ–3	31388.27
2.	ಬೆಣ್ಣೆತೊರಾ	6539.46
3.	ಹಿಪ್ಪರಗಿ	83336.13
4.	ಮಲಪ್ರಭಾ	12803.11
5.	ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ–1 ಮತ್ತು 2	65489.81
6.	ತುಂಗಾ ಮೇಲ್ದಂಡೆ ಯೋಜನೆ	64960.72
7.	ಮಾರ್ಕಂಡೇಯ	3605.83
8.	ಸಿಂಗಟಲೂರು	56788.36
9.	ದೂದ್‌ಗಂಗಾ	10636.29
10.	ಭೀಮಾ ಏತ ನೀರಾವರಿ	14125.23
11.	ತುಂಗಭದ್ರಾ ಎಡದಂಡೆ ಕಾಲುವೆ	1841.43
12.	ತುಂಗಭದ್ರಾ ಬಲಮೇಲ್ದಂಡೆ ಕಾಲುವೆ	5219.62
13.	ಡಿ. ದೇವರಾಜ ಅರಸು ನಾಲೆ	3393.06
14.	ಹಿಪ್ಪರಗಿ	5849.76
15.	ಹೇಮಾವತಿ	199128.68
16.	ಕಬಿನಿ	82488.84
17.	ಕೆ.ಆರ್.ಎಸ್. ಆಧುನೀಕರಣ	6909.05

1	2	3
18.	ಯಗಚಿ	15401.74
19.	ವಾರಾಹಿ	9267.61
20.	ಕಾರಂಜಾ	7520.86
	ಪ್ರಗತಿಯಲ್ಲಿರುವ ಯೋಜನೆಗಳು : ಮಧ್ಯಮ ನೀರಾವರಿ ಯೋಜನೆಗಳು	
1.	ಅಮರ್ಜಾ	2322.67
2.	ಇಟಗಿ–ಸಾಸಲವಾಡ ಏತ	735.25
3.	ಬಸಾಪುರ ಏತ	779.83
4.	ಗಂಡೋರಿನಾಲಾ	4835.68
5.	ಹಿರೇಹಳ್ಳ	2070.69
6.	ಮುಲ್ಲಾಮಾರಿ ಕೆಳದಂಡೆ	2798.45
7.	ಮೆಸ್ಕಿನಾಲಾ	551.41
8.	ಹರಿನಾಲಾ	319.5
9.	ಅರ್ಕಾವತಿ	3039.95
10.	ಹುಚ್ಚನಕೊಪ್ಪಲು	1249.96
11.	ಇಗ್ಗಲೂರು	1920.17
12.	ಕಾಮಸಮುದ್ರ	910.11
13.	ಮಂಚನಬೆಲೆ	350.9
14.	ತಾರಕ	2046.64
15.	ಉಡುತೊರೆಹಳ್ಳ	1847.22
16.	ವಾಟೆಹೊಳೆ	619.18
17.	ಚಿಕ್ಲಿಹೊಳೆ	34.92
18.	ಚುಲ್ಕಿನಾಲಾ	554.43
	ಒಟ್ಟು	704045.82

596(460) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಅದರ ಅಂಗ ಸಂಸ್ಥೆಗಳು ಹೊಂದಿರುವ ಬಸ್ಸುಗಳು ಎಷ್ಟು;

ಆ) ಸಂಸ್ಥೆ ಎಷ್ಟು ವಿಭಾಗಗಳನ್ನು ಹೊಂದಿದೆ ಹಾಗೂ ವಿಭಾಗದಲ್ಲಿ ಎಷ್ಟು ಶೆಡ್ಯೂಲ್‌ಗಳನ್ನು ಹೊಂದಿದೆ (ವಿಭಾಗವಾರು ವಿವರ ನೀಡುವುದು);

ಇ) ಸಂಸ್ಥೆಯಲ್ಲಿ ಖಾಯಂ ಆಗಿ ಸೇವೆ ಸಲ್ಲಿಸುತ್ತಿರುವ ಚಾಲಕ–ನಿರ್ವಾಹಕರು ಎಷ್ಟು;